**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಎನ್.ಡಿ.ಪಿ.ಎಸ್. 02/2025**

ಅಸಾ ಃ 01
ಚಾಸಾ ಃ 02

| | | |
|---|---|---|
| ಸಾಕ್ಷಿದಾರರ ಹೆಸರು | ಃ | ವೀರೇಶ ಈಳಗೇರ |
| ತಂದೆಯ ಹೆಸರು | ಃ | ದಶರಥ |
| ವಯಸ್ಸು | ಃ | 37 ವರ್ಷ |
| ಉದ್ಯೋಗ | ಃ | ಖಾಸಗಿ ಶಿಕ್ಷಕರು, |
| ವಾಸ ಸ್ಥಳ | ಃ | ಹಾವೇರಿ. |

ದಿನಾಂಕಃ **13/01/2026** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ –**

1. ಇಂದು ಹಾಜರಿರುವ 1 ರಿಂದ 3 ನೇ ಆರೋಪಿತರು ಹಾಗೂ ಚಾಸಾ-1 ಮತ್ತು 3 ನನಗೆ ಗೊತ್ತು.

2. ದಿನಾಂಕಃ10/11/2024 ರಂದು ಪೊಲೀಸರು ನನಗೆ ಒಂದು ನೋಟೀಸು ಕೊಟ್ಟು ಪಂಚನಾಮೆಗೆ ಕರೆದರು. ಈಗ ತೋರಿಸಿದ ನೋಟೀಸಿನ ಮೇಲೆ ನನ್ನ ಸಹಿ ಇರುತ್ತದೆ. ನೋಟೀಸನ್ನು ನಿಪಿ-1, ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಚಾಸಾ-1 ಪಿ.ಎಸ್.ಐ. ರವರು ನಮ್ಮನ್ನು ಹಾವೇರಿಯ ಹಾನಗಲ್ಲ ಬೈಪಾಸ ರಸ್ತೆಗೆ ಕರೆದುಕೊಂಡು ಹೋದರು. ಹಾವೇರಿ-ರಾಣೆಬೆನ್ನೂರು ಸರ್ವಿಸ್ ರಸ್ತೆಯಲ್ಲಿ 3 ಜನ ಹಾಜರಿದ್ದರು. ಅವರ ಹತ್ತಿರ ಬ್ಯಾಗು ಇದ್ದವು. ಪೊಲೀಸರು ಬ್ಯಾಗುಗಳನ್ನು ಪರಿಶೀಲಿಸಿದರು. ಬ್ಯಾಗುಗಳಲ್ಲಿ ಗಾಂಜಾ ಇತ್ತು.

3. 1 ನೇ ಆರೋಪಿ ಇಬ್ರಾಹಿಂ ಹತ್ತಿರ ಇದ್ದ ಗಾಂಜಾವನ್ನು ತೂಗಿ ನೋಡಿದಾಗ 4674 ಗ್ರಾಂ ತೂಕ ಇತ್ತು. ಸದರಿ ಆರೋಪಿ ಹತ್ತಿರ ಸ್ಕ್ರೀನ ಒಡೆದ ಒಂದು ಮೊಬೈಲ್ ಇತ್ತು. 2 ನೇ ಆರೋಪಿ ಯಾಸಿನ್ ಹತ್ತಿರ ಇದ್ದ ಗಾಂಜಾವನ್ನು ತೂಗಿ ನೋಡಿದಾಗ 2576 ಗ್ರಾಂ ತೂಕ ಇತ್ತು. ಮತ್ತೊಬ್ಬ ಆರೋಪಿ ಹತ್ತಿರ ಗಾಂಜಾ ಇರಲಿಲ್ಲ.

4. ಪೊಲೀಸರು ಪಂಚನಾಮೆ ತಯಾರಿಸಿ ನನ್ನ ಸಹಿ ಪಡೆದರು. ಈಗ ತೋರಿಸಿದ ಪಂಚನಾಮೆ ಮೇಲೆ ಇರುವ ಸಹಿ ನನ್ನದೇ ಇದ್ದು, ಪಂಚನಾಮೆಯನ್ನು ನಿಪಿ-2, ನನ್ನ ಒಂದು ಸಹಿ

ಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆಗ ಪಡೆದ 6 ಪುಟಗಳಲ್ಲಿ ತಲಾ 2 ರಂತೆ ಇರುವ ಪೋಟೋಗಳನ್ನು ಈಗ ನಿಪಿ-3 ರಿಂದ 14 ಎಂದು ಗುರುತಿಸಲಾಯಿತು.

5. ಆ ದಿನ ಜಪ್ತಿಮಾಡಲಾದ ಸ್ವತ್ತನ್ನು ಗುರುತಿಸಬಲ್ಲೆ. ಈಗ ತೋರಿಸಿದ ಒಂದು ಪಾರದರ್ಶಕ ಪ್ಲಾಸ್ಟಿಕ್ ಚೀಲದಲ್ಲಿ ಸೀಲು ಮಾಡಿರುವ ಒಂದು ಚೀಲ ಆ ದಿನ ಜಪ್ತಿಮಾಡಿದ್ದೇ ಇದ್ದು, ಅದನ್ನು ಮುಮಾ-1 ಎಂದು ಗುರುತಿಸಲಾಯಿತು. (ಮಾನ್ಯ ಸಾಅರವರ ವಿನಂತಿ ಮೇರೆಗೆ ಸೀಲ್ಡ ಕವರನ್ನು ತೆರೆದು ಅದರಲ್ಲಿಯ ಸ್ವತ್ತನ್ನು ಸಾಕ್ಷಿಗೆ ತೋರಿಸಲಾಯಿತು.) ಈಗ ತೋರಿಸಿದ ಮೊಬೈಲ್ ಆ ದಿನ ಜಪ್ತಿಮಾಡಿದ್ದೇ ಇರುತ್ತದೆ. ಮೊಬೈಲನ್ನು ಮುಮಾ-2 ಎಂದು ಗುರುತಿಸಲಾಯಿತು. ಈಗ ತೋರಿಸಿದ ಒಂದು ಪಾರದರ್ಶಕ ಪ್ಲಾಸ್ಟಿಕ್ ಚೀಲದಲ್ಲಿ ಸೀಲು ಮಾಡಿರುವ 2 ಲಗೇಜ ಬ್ಯಾಗಗಳು ಆ ದಿನ ಜಪ್ತಿಮಾಡಿದ್ದವೇ ಇದ್ದು, ನೇರಳೆ ಬಣ್ಣದ ಲಗೇಜ ಬ್ಯಾಗನ್ನು ಮುಮಾ-3 ಮತ್ತು ಕಂದು ಬಣ್ಣದ ಲಗೇಜ ಬ್ಯಾಗನ್ನು ಮುಮಾ-4 ಎಂದು ಗುರುತಿಸಲಾಯಿತು.

*(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ದಾಖಲೆಗಳನ್ನು ಹಾಗೂ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ, ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)*

**<u>ಪಾಟೀ ಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ –</u>**

6. 2 ನೇ ಆರೋಪಿ ಹೆಸರು ನಿಸ್ಸಾರ ತಂದೆ ಅಬ್ದುಲಸತ್ತಾರ ಹಿರೇಕೌಂಸಿ ಎನ್ನುವುದು ನಿಜ. 2576 ಗ್ರಾಂ ಗಾಂಜಾ ಸದರಿ ಆರೋಪಿ ಸ್ವಾಧೀನದಲ್ಲಿ ಇತ್ತು ಎನ್ನುವುದು ನಿಜ. 3 ನೇ ಆರೋಪಿ ಹೆಸರು ಯಾಸಿನ್ ಮಹಮ್ಮದಜಾಫರ ನಾಶಿಪುಡಿ ಎನ್ನುವುದು ನಿಜ. 990 ಗ್ರಾಂ ಗಾಂಜಾ ಸದರಿ ಆರೋಪಿ ಸ್ವಾಧೀನದಲ್ಲಿ ಇತ್ತು ಎನ್ನುವುದು ಸುಳ್ಳು. ಪೊಲೀಸರು ಆ ದಿನ ಈ ದಿನ ಹಾಜರಿರುವ 1 ರಿಂದ 3 ನೇ ಆರೋಪಿತರ ಅಂಗಶೋಧನೆ ಮಾಡಿದರು ಮತ್ತು ಜಪ್ತಿಮಾಡಲಾದ ಗಾಂಜಾ ಸದರಿ ಆರೋಪಿತರ ಸ್ವಾಧೀನದಲ್ಲಿ ಇತ್ತು ಎನ್ನುವುದು ನಿಜ.

**<u>ಪಾಟೀ ಸವಾಲು 1 ಮತ್ತು 2 ನೇ ಆರೋಪಿ ಪರ ಶ್ರೀ ಕೆ.ವಿ.ವಿ. ವಕೀಲರಿಂದಃ-</u>**

7. ಸಿ.ಇ.ಎನ್. ಪೊಲೀಸ ಠಾಣೆಯ ಪೊಲೀಸ ಸಿಬ್ಬಂದಿ ಇಜಾರಿಲಕಮಾಪುರದ ನಮ್ಮ ಮನೆಗೆ ಬಂದು ನನಗೆ ನೋಟೀಸು ಕೊಟ್ಟರು. ಅವರ ಹೆಸರು ಗೊತ್ತಿಲ್ಲ. ಮಧ್ಯಾಹ್ನ 2.30 ರ ಸುಮಾರಿಗೆ ನಾನು ಪೊಲೀಸ ಠಾಣೆಗೆ ಹೋದೆ. ಹಾವೇರಿಯ ಹಾನಗಲ್ಲ ಬೈಪಾಸ ರಸ್ತೆ ಹತ್ತಿರ ನಾನು ಹೋದಾಗ ಈರಣ್ಣ ಹೆಡ್ಡಿಗೊಂಡ ಎನ್ನುವವರು ಹಾಜರಿದ್ದರು. ಹಾಜರಿದ್ದ ಉಳಿದ ಇತರ ವ್ಯಕ್ತಿಗಳ ಹೆಸರು ಗೊತ್ತಿಲ್ಲ. ಆರೋಪಿತರ ಹೆಸರು ಗೊತ್ತು. ಗುನ್ಹೆ ಜಾಗೆಯ ಚೆಕ್ಕುಬಂದಿ ಹೇಳಲು ಬರುವುದಿಲ್ಲ. ಯಾವ ಆರೋಪಿಯನ್ನು ಯಾವ ಪೊಲೀಸ ಅಧಿಕಾರಿ/ಸಿಬ್ಬಂದಿ ಹಿಡಿದರು ಎಂದು ಹೇಳಲು ಬರುವುದಿಲ್ಲ.

8. ಪಂಚನಾಮೆ ಬರೆದ ವ್ಯಕ್ತಿಯ ಹೆಸರು ಹೇಳಲು ಬರುವುದಿಲ್ಲ. ಪಂಚನಾಮೆ ಬರೆಯಲು ಮಾಹಿತಿ ನೀಡಿದವರ ಹೆಸರು ಗೊತ್ತಿಲ್ಲ. ಪೊಲೀಸ ಠಾಣೆಯ ಕ್ಯಾಮೆರಾದಿಂದ ಫೋಟೋ ಪಡೆಯಲಾಯಿತು. ಪರಶುರಾಮ ಲಮಾಣಿ ಎನ್ನುವ ಪೊಲೀಸ ಸಿಬ್ಬಂದಿ ಫೋಟೋ ಪಡೆದರು. ಗಾಂಜಾ ತೂಕ ಮಾಡಿದ ವ್ಯಕ್ತಿಯ ಹೆಸರು ಗೊತ್ತಿಲ್ಲ. ಪೊಲೀಸ ಠಾಣೆಯಲ್ಲಿ ನಾನು 5-6 ಸಹಿಗಳನ್ನು ಮಾಡಿದ್ದೇನೆ. ನಾನು ಸಹಿ ಮಾಡಿದ ದಾಖಲೆಗಳಲ್ಲಿ ಗಾಂಜಾ ಇತ್ಯಾದಿ ಸಿಕ್ಕ ಬಗ್ಗೆ ಬರೆಯಲಾಗಿತ್ತು. ನಾನು ಬೇರೆ ಯಾವುದೇ ಸಹಿ ಮಾಡಿಲ್ಲ ಎಂದರೆ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಈಗ ತೋರಿಸಿದ ನಿಪಿ-2 ರಲ್ಲಿ ಇರುವ ಸಹಿಯನ್ನು ಠಾಣೆಯಲ್ಲಿಯೇ ಮಾಡಿದ್ದೇನೆ ಎನ್ನುವುದು ನಿಜ.

9. ಪೊಲೀಸರು ನನ್ನನ್ನು ಕರೆದಿಲ್ಲ, ಆರೋಪಿತರ ಅಂಗಶೋಧನೆ ಮಾಡಿಲ್ಲ, ಅವರಿಂದ ಯಾವುದೇ ಸ್ವತ್ತನ್ನು ಜಪ್ತಿಮಾಡಿಲ್ಲ ಮತ್ತು ಪಂಚನಾಮೆ ತಯಾರಿಸಿಲ್ಲ ಮತ್ತು ಫೋಟೋ ಪಡೆದಿಲ್ಲ ಎನ್ನುವುದು ಸುಳ್ಳು. ಠಾಣೆಯಲ್ಲಿಯೇ ಕುಳಿತು ಸಹಿ ಮಾಡಿ ಪೊಲೀಸರ ಮಾತು ಕೇಳಿ ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**<u>ಪಾಟೀ ಸವಾಲು 3 ನೇ ಆರೋಪಿ ಪರ ಶ್ರೀ ಎಫ್.ಕೆ.ಎಸ್. (ಬಿ.ಆರ್.ಎಚ್.) ವಕೀಲರಿಂದಃ-</u>**

*(ಮೇಲಿನ ಪಾಟೀ ಸವಾಲನ್ನು ಅನುಮೋದಿಸಿರುತ್ತಾರೆ.)*

**<u>ಮರುವಿಚಾರಣೆಃ</u>** ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.